ರಾಜ್ಯದ ಡೈರಿಗಳಿಗೆ ಕೊಂಡ ಡಿಟರ್ಜೆಂಟ್‌ಗಳ ಪ್ರಮಾಣದ ಬಗ್ಗೆ

೧೫೫ (೧೪೮) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಪಶುಸಂಗೋಪನಾ ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಮಂಗಳೂರು, ಗುಲ್ಬರ್ಗಾ, ಧಾರವಾಡ ಮತ್ತು ಬೆಳಗಾವಿಯಲ್ಲಿರುವ ಡೈರಿಗಳಿಗೆ ಕೊಂಡ ಡಿಟರ್ಜೆಂಟ್‌ಗಳ ಪ್ರಮಾಣ.

(ಆ) ಇದಕ್ಕಾಗಿ ವೆಚ್ಚ ಮಾಡಿದ ಮೊಬಲಗು.

(ಇ) ಸರಬರಾಜು ಮಾಡಿದವರ ಹೆಸರು ಮತ್ತು ವಿಳಾಸ.

ಶ್ರೀ ವಿಶ್ವನಾಥ ರೆಡ್ಡಿ (ಪಶು ಸಂಗೋಪನಾ, ಪಶು ವೈದ್ಯಕೀಯ ಹಾಗೂ ತೋಟಗಾರಿಕೆ ಮಂತ್ರಿಗಳು).—

(ಅ) ಮಂಗಳೂರು : ೧೨,೫೩೦ ಕಿಲೋ
ಗುಲ್ಬರ್ಗಾ : ೨,೨೪೫ ಕಿಲೋ
ಧಾರವಾಡ : ೪,೯೯೦ ಕಿಲೋ
ಬೆಳಗಾವಿ : ೧,೪೦೦ ಕಿಲೋ
ಒಟ್ಟು ೨೧,೦೬೫ ಕಿಲೋ

(ಆ) ಮಂಗಳೂರು : ೧,೬೦,೧೦೧.೦೦ ರೂಪಾಯಿಗಳು
ಗುಲ್ಬರ್ಗಾ : ೨೮,೧೧೬.೨೦ ರೂಪಾಯಿಗಳು
ಧಾರವಾಡ : ೫೧,೩೭೨.೫೦ ರೂಪಾಯಿಗಳು
ಬೆಳಗಾವಿ : ೧೪,೯೫೯.೪೦ ರೂಪಾಯಿಗಳು
ಒಟ್ಟು ೨,೫೪,೫೨೯.೧೦ ರೂಪಾಯಿಗಳು

(ಇ) ಮಂಗಳೂರು : (೧) ಶ್ರೀ ಮೆ।। ಆಸ್ಪ್ರಾಕೆಮ್, ಹಳೇ ತರಗು ಪೇಟೆ, ಬೆಂಗಳೂರು.
(೨) ಮೆ।। ಇಂಡಸ್ಟ್ರಿಯಲ್ ಡಿಟರ್ಜೆಂಟ್ಸ್ ಅಂಡ್ ಕೆಮಿಕಲ್ಸ್, ಮಂಗಳೂರು

ಗುಲ್ಬರ್ಗಾ : (೧) ಮೆ।। ಜೆ. ಜೆ. ಎಂಟರ್‌ಪ್ರೈಸಸ್, ಬೆಂಗಳೂರು
(೨) ಮೆ।। ಸೊಬಲ್ ಟ್ರೇಡರ್ಸ್, ಗುಲ್ಬರ್ಗಾ
(೩) ಮೆ।। ಆಶಾ ಕೆಮಿಕಲ್ ಇಂಡಸ್ಟ್ರೀಸ್, ಬಿಜಾಪುರ
(೪) ಮೆ।। ಯುನೈಟೆಡ್ ಸೈಂಟಿಫಿಕ್ ಏಜೆನ್ಸಿ, ಗುಲ್ಬರ್ಗಾ

ಧಾರವಾಡ : (೧) ಮೆ। ವೆಂಕಟೇಶ್ವರ ಎಂಟರ್‌ಪ್ರೈಸಸ್, ೪೮, ಲಾಂಗ್‌ಫರ್ಡ್ ರಸ್ತೆ, ಬೆಂಗಳೂರು
(೨) ಮೆ।। ಫಾರ್ ಈಸ್ಟ್ ಫಾರ್ಮಸ್ಯುಟಿಕಲ್ಸ್, ೧೧೩, ಪೆಮೆಲ್ಲೊ ರಸ್ತೆ, ಮದ್ರಾಸು
(೩) ಮೆ।। ಏಶ್ಯನ್ ಹಾರ್ಡ್‌ವೇರ್ಸ್, ೧೭, ಬಾರನ್ ಲೇನ್, ಹುಬ್ಬಳ್ಳಿ-೨೦

(ಳ) ಮೆ।। ಡಿ. ರಂಗನಾಥನ್, ಖಾಸಬಾಗ್, ಖಣೆ ಬಜಾರ್, ಬೆಳಗಾಂ–೩

(ಱ) ಮೆ।। ಜೆ. ಜೆ. ಎಂಟರ್ ಪ್ರೈಸಸ್, ೩೦೬, ೭ನೇ 'ಸಿ' ಮೈನ್, ಜಯನಗರ, ಬೆಂಗಳೂರು–೧೧

(೬) ಎಲ್. ಕೆ. ಸಾಂಗ್ಲೀಕರ್ ಮಾರ್ಕೆಟ್, ಧಾರವಾಡ

ಬೆಳಗಾವಿ : (೧) ಮೆ।। ಡಿ. ರಂಗನಾಥನ್, ಶಾಹಪುರ, ಬೆಳಗಾಂ.

ಮೇಲೆ ನಮೂದಿಸಿರುವ ವಿವರಣೆಗಳು ೧೯೮೨–೮೩ನೇ ಸಾಲಿಗೆ ಸಂಬಧಪಟ್ಟದ್ದು.

ಗಂಗಾವತಿಯ ಸರ್ಕಾರಿ ಕಿರಿಯ ಕಾಲೇಜಿಗೆ ಬೇಕಾದ ಸೌಲಭ್ಯಗಳ ಬಗ್ಗೆ

೧೫೬೬ (೮೧) ಶ್ರೀ ಹೆಚ್. ಎಸ್. ಮುರಳಿಧರ್ (ಗಂಗಾವತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗಂಗಾವತಿಯ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರೌಢಶಾಲೆ ತರಗತಿಗಳು ಪಾಳಿ ಪ್ರಕಾರ ನಡೆಯುತ್ತಿದ್ದು ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದರಿಂದ ಹೆಚ್ಚಿನ ಕೊಠಡಿಗಳು ಮತ್ತು ಒಂದು ಸಭಾಂಗಣ ಅತ್ಯಪಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

(ಆ) ಸದರಿ ಕಾಲೇಜಿಗೆ ಸೌಕರ್ಯಗಳು, ಪ್ರಯೋಗಶಾಲೆ ಸಲಕರಣೆಗಳು, ಗ್ರಂಥಾಲಯ, ಆಸನಗಳು ಮತ್ತು ಬೋಧಿಸುವ ಸಲಕರಣೆಗಳು ಅತ್ಯವಶ್ಯಕವೆಂದು ಸರ್ಕಾರ ಗಮನಿಸಿದೆಯೆ ;

(ಇ) 'ಆ'ನಲ್ಲಿ ಹೇಳಿರುವಂತೆ ಹೆಚ್ಚಿನ ಕೊಠಡಿಗಳನ್ನು ಒಂದು ಸಭಾಂಗಣವನ್ನು ಮತ್ತು ಸಲಕರಣೆಗಳನ್ನು ಒದಗಿಸಲು ಕೂಡಲೇ ಕ್ರಮ ತೆಗೆದುಕೊಳ್ಳಲು ಸರ್ಕಾರ ಇಚ್ಚಿಸುತ್ತದೆಯೇ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ಹೌದು

(ಆ) ಹೌದು

(ಇ) ೧೯೮೪–೮೫ರಲ್ಲಿ ಹೆಚ್ಚಿನ ಕೊಠಡಿಗಳನ್ನು ಹಾಗೂ ಉಳಿದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುವುದು.

ರಾಜ್ಯದಲ್ಲಿರುವ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳನ್ನು ಭರ್ತಿಮಾಡುವ ಬಗೆ

೧೫೬೭ (೮೫೭) ಶ್ರೀ ಕೆ. ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಶಿಕ್ಷಣ ಮಂತ್ರಿಗಳೆ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ರಾಜ್ಯದಲ್ಲಿರುವ ಕಿರಿಯ ಮತ್ತು ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ, ಮಂಜೂರಾದ ಎಲ್ಲಾ ವರ್ಗಗಳಲ್ಲಿ ಉಪನ್ಯಾಸಕರು, ರೀಡರುಗಳು ಮತ್ತು ಪ್ರಾಧ್ಯಾಪಕರುಗಳು ಮತ್ತು ಈಗ ಕೆಲಸ ಮಾಡುತ್ತಿರುವ ಸಿಬ್ಬಂದಿ

(ಆ) ಕೊರತೆ ಇರುವ ಉಪನ್ಯಾಸಕರು ರೀಡರ್ಸ್ ಮತ್ತು ಪ್ರಾಧ್ಯಾಪಕರುಗಳು ಇದ್ದಲ್ಲಿ ಎಂದಿನಿಂದ ಮತ್ತು ಈ ಬಗ್ಗೆ ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮ ;